






## ಲಿಂಗ ಸೂಕ್ಷ್ಮತೆಯೂ, ಶೀಲಕ್ಕೆ ಬೆಲೆಯೂ...

ನಮ್ಮ ಸಮಾಜದಲ್ಲಿ ಎಲ್ಲಾ ಕ್ಷೇತ್ರ, ವಿಭಾಗಗಳಲ್ಲೂ ಲಿಂಗಸೂಕ್ಷ್ಮತೆಯ ಅರಿವಿನ ಕೊರತೆ ಇದೆ. ಅತ್ಯಾಚಾರ ಕುರಿತು ಎಫ್‌ಐಆರ್ ದಾಖಲಾದ ಬಳಿಕ ಚಾರ್ಜ್‌ಶೀಟ್ ಹಾಕಲು 90 ದಿನಗಳ ಕಾಲಾವಕಾಶವಿದೆ. ಇತರ ಪ್ರಕರಣಗಳಲ್ಲೂ ಇಷ್ಟೇ ದಿನಗಳ ಅವಕಾಶವಿದೆ. ಮೂರು ತಿಂಗಳ ಅವಧಿಯಲ್ಲಿ ಅತ್ಯಾಚಾರ ಪ್ರಕರಣಗಳು ಕಾವು ಕಳೆದುಕೊಳ್ಳುತ್ತವೆ. ಮುಖ್ಯವಾಗಿ ಸಂತ್ರಸ್ತೆಯನ್ನು ಹೇಗೆ ನಡೆಸಿಕೊಳ್ಳಬೇಕು ಎಂಬ ಬಗ್ಗೆ ಲಿಂಗಸೂಕ್ಷ್ಮತೆಯೇ ನಮ್ಮಲ್ಲಿ ಇಲ್ಲ. ಎಷ್ಟೋ ಬಾರಿ ಕೆಲ ಪೊಲೀಸ್ ಸಿಬ್ಬಂದಿಯೇ ಸಂತ್ರಸ್ತೆಯನ್ನು ನಿಕೃಷ್ಟವಾಗಿ ನೋಡುತ್ತಾರೆ. ಸಂತ್ರಸ್ತೆ ಮಾನಸಿಕವಾಗಿ ಅನುಭವಿಸುವ ಹಿಂಸೆಯನ್ನು ಪದಗಳಲ್ಲಿ ಹಿಡಿದಿಡಲು ಸಾಧ್ಯವೇ? ನಮ್ಮ ಜತೆಗೆ ಯಾರು ನಿಲ್ಲುತ್ತಾರೆ ಎಂಬುದೂ ಮುಖ್ಯವಾಗುತ್ತದೆ.

ವಿಚಾರಣೆ ಮುಗಿದ ತಕ್ಷಣ ಕಾನೂನು ಪ್ರಕ್ರಿಯೆ ಮುಗಿಯುವುದಿಲ್ಲ. ಡಿಫೆನ್ಸ್ ಪ್ರತಿಪಾದನೆ, ಸಾಕ್ಷ್ಯಗಳ ಪ್ರಮಾಣೀಕರಣವೂ ಇರುತ್ತದೆ. ಎಲ್ಲ ಮುಗಿದು ಅಪರಾಧಿಗೆ ನ್ಯಾಯಾಲಯ ಜೈಲುಶಿಕ್ಷೆಯ ಜತೆಗೆ ದಂಡವನ್ನೂ ವಿಧಿಸಬಹುದು ನಿಜ. ಆದರೆ, ಹಣ ಕೊಡಿಸುವ ಮೂಲಕ ಇಲ್ಲವೇ ದಂಡ ಕಟ್ಟಿಸಿಕೊಳ್ಳುವ ಮೂಲಕ ಸಂತ್ರಸ್ತೆಗೆ ನ್ಯಾಯ ಒದಗಿಸಲು ಸಾಧ್ಯವೇ? ಆಕೆಯ ಶೀಲಕ್ಕೆ ಬೆಲೆ ಕಟ್ಟಲು ಸಾಧ್ಯವೇ?

**-ಆರ್. ಮಂಜುಳಾ ದೇವಿ,** ಹಿರಿಯ ವಕೀಲೆ

ಪ್ರಕ್ರಿಯೆಗಳು, ಕೋರ್ಟ್, ಆಸ್ಪತ್ರೆ, ಠಾಣೆಗೆ ಪದೇ ಪದೇ ಅಲೆಯಬೇಕಾದ ಪರಿಸ್ಥಿತಿಯ ಕಾರಣಕ್ಕೇ ಬಹುತೇಕ ಸಂತ್ರಸ್ತೆಯರು ಇಲ್ಲವೇ ದೂರುದಾರರು ಪ್ರಕರಣಗಳನ್ನು ದಾಖಲಿಸಲು ಹಿಂದೇಟು ಹಾಕುತ್ತಾರೆ. ಒಂದು ವೇಳೆ ಪ್ರಕರಣ ದಾಖಲಿಸಿದರೂ ದೀರ್ಘಕಾಲದ ಕಾನೂನು ಪ್ರಕ್ರಿಯೆಗಾಗಿ ಎಲ್ಲ ಕೆಲಸಗಳನ್ನೂ ಬಿಟ್ಟು ಕೋರ್ಟಿಗಾಗಿ ಸಮಯ ಮೀಸಲಿಡುವುದು, ಹಣ ವೆಚ್ಚದ ಕಾರಣಕ್ಕಾಗಿ ಸಂತ್ರಸ್ತೆಯರು, ದೂರುದಾರರು ರಾಜಿ ಸಂಧಾನ ಆಗುತ್ತಾರೆ.

ವಿಚಾರಣೆಯ ವೇಳೆ ಆರೋಪಿಗಳ ಪರ ವಕೀಲರು, ಸಂತ್ರಸ್ತೆಯ ಮನಸಿಗೆ ನೋವಾಗುವಂಥ ಪ್ರಶ್ನೆಗಳನ್ನು ಕೇಳುತ್ತಾರೆ. ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಸಂತ್ರಸ್ತೆಯರನ್ನು ಮುಜುಗರಕ್ಕೆ ಸಿಲುಕಿಸುವ ಪ್ರಯತ್ನಗಳೂ ನಡೆಯುತ್ತವೆ. ಆ ರೀತಿಯ ಸಂದರ್ಭಗಳಲ್ಲಿ ಸಂತ್ರಸ್ತೆಯರು ಅಧೀರರಾಗುತ್ತಾರೆ. ತಮ್ಮ ಮೇಲಾದ ದುರ್ಘಟನೆ ನೆನೆದು ಭಾವುಕರಾಗುತ್ತಾರೆ. ನೋವು, ಮಾನಸಿಕ ಯಾತನೆ ಅನುಭವಿಸುತ್ತಾರೆ. ಅಂಥ ಸಂದರ್ಭಗಳಲ್ಲಿ ಸಂತ್ರಸ್ತೆ ಸರಿಯಾದ ಹೇಳಿಕೆ ನೀಡಲು ಸಾಧ್ಯವಾಗದು ಎನ್ನುತ್ತಾರೆ ವಕೀಲ ಶಿವಮಣಿ.

### ಕೊರತೆಗಳ ಆಗರ ಈ ವ್ಯವಸ್ಥೆ

ಅಪರಾಧಿಗಳಿಗೆ ಶಿಕ್ಷೆ ಆಗದಿರಲು ಸಮಾಜದ ಎಲ್ಲಾ ಆಯಾಮಗಳಲ್ಲೂ ಕೊರತೆಗಳಿವೆ. ಇವುಗಳನ್ನು ಸರಿಪಡಿಸಿ ಸೂಕ್ತ ವ್ಯವಸ್ಥೆಯನ್ನು ರೂಪಿಸುವ ಅಗತ್ಯ ಹಿಂದಿಗಿಂತಲೂ ಈಗ ಅಗತ್ಯವಿದೆ ಎನ್ನುತ್ತಾರೆ ಹಿರಿಯ ವಕೀಲೆ ಆರ್. ಮಂಜುಳಾ ದೇವಿ.

ಅತ್ಯಾಚಾರ ಪ್ರಕರಣಗಳಲ್ಲಿ ತನಿಖಾ ಏಜೆನ್ಸಿಗಳ ನಿರ್ಲಕ್ಷ್ಯವನ್ನು ಅಲ್ಲಗಳೆಯಲಾಗದು. 'ದಿನವೂ ಇಂಥದ್ದೇ ಪ್ರಕರಣಗಳು ವರದಿಯಾಗುತ್ತವೆ. ಆಮೇಲೆ ಹೇಗಿದ್ದರೂ ಅವರಿಬ್ಬರು ಸೆಟಲ್‌ಮೆಂಟ್ ಮಾಡಿಕೊಳ್ಳುತ್ತಾರೆ ಬಿಡಿ' ಎಂದು ನಿರ್ಲಕ್ಷ್ಯವಹಿಸುವ ಸಾಧ್ಯತೆಯೇ ಅಧಿಕ. ಯಾವುದೇ ಪ್ರಕರಣ ಗಟ್ಟಿಯಾಗಿ ನಿಲ್ಲಬೇಕಾದರೆ, ಮೊದಲು ಅದರ ಅಡಿಪಾಯ ಸರಿಯಾಗಿರಬೇಕು. ಅಡಿಪಾಯವೇ ಸಡಿಲವಾಗಿದ್ದರೆ ಮುಂದೆ ಕೇಸ್ ಬಿದ್ದುಹೋಗುವ ಸಾಧ್ಯತೆಯೇ ಹೆಚ್ಚು. ಅತ್ಯಾಚಾರ ಆದ 24 ಗಂಟೆಗಳ ಒಳಗಾಗಿ ಸಂತ್ರಸ್ತೆಯ ವೈದ್ಯಕೀಯ ಪರೀಕ್ಷೆ ಆಗಬೇಕು. ಘಟನೆ ಸ್ಥಳದಲ್ಲಿ ವಿಧಿವಿಜ್ಞಾನ ತಂಡ ಸಾಕ್ಷ್ಯಾಧಾರ ಸಂಗ್ರಹಿಸಬೇಕು. ಸಂತ್ರಸ್ತೆ ಅಪ್ರಾಪ್ತೆಯಾಗಿದ್ದರೆ ಪೋಷಕರೇ ಬಂದು ದೂರು ಕೊಡಬೇಕು. ದೂರು ಕೊಟ್ಟರೂ ಕೋರ್ಟ್‌ಗಳಲ್ಲಿ ತ್ವರಿತವಾಗಿ ವಿಚಾರಣೆ ನಡೆಯದು. ಒಂದು ವೇಳೆ ಸಂತ್ರಸ್ತೆ ಸಾವಿಗೀಡಾಗಿದ್ದರೆ, ಕೆಲವು ಪೋಷಕರು ಹಣ ಪಡೆದು ಸುಮ್ಮನಾಗಿಬಿಡುತ್ತಾರೆ. ಹಾಗಾಗಿ, ಅನೇಕ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ ಮಂಜುಳಾ ದೇವಿ.

ಸಮಾಜದೊಳಗೆ ಲಿಂಗಸೂಕ್ಷ್ಮತೆಯ ಅರಿವು, ಕಾನೂನಿನ ಸಮರ್ಪಕ ಜಾರಿ, ಬಾಕಿ ಪ್ರಕರಣಗಳ ಶೀಘ್ರ ವಿಲೇವಾರಿಯಾಗದ ಹೊರತು ಅತ್ಯಾಚಾರಿಗಳಿಗೆ ಶಿಕ್ಷೆಯಾಗದು. ಆದರೆ, ಅವರು ತಮ್ಮ ಆತ್ಮಸಾಕ್ಷಿಯಿಂದ ತಪ್ಪಿಸಿಕೊಳ್ಳಲು ಹೇಗೆ ಸಾಧ್ಯ?

'ನನ್ನನ್ನು ಹೀಗೆ ಮಾಡಿದ್ದಕ್ಕೆ ನೀನು ಏನೋ ಸಾಧಿಸಿಬಿಟ್ಟೆ ಅಂದ್ಕೋಬೇಡ. ನಾನು ಸೋಲೋದಿಲ್ಲ. ಇದರಿಂದ ನಾನು ಖಂಡಿತಾ ಆಚೆ ಬರ್ತೀನಿ' ಅನ್ನುವ 'ಮಹಾರಾಜ' ಸಿನಿಮಾದ ಅಮ್ಮುವಿನ ಮಾತುಗಳಷ್ಟೇ ಅತ್ಯಾಚಾರ ಪ್ರಕರಣಗಳ ಸಂತ್ರಸ್ತೆಯ ಪಾಲಿಗೆ ಧೈರ್ಯ ತುಂಬಬಲ್ಲವು.

ಪ್ರತಿಕ್ರಿಯಿಸಿ: feedback@sudha.co.in